ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಹಾಗೂ ಎಫ್.ಟಿ.ಎಸ್.ಸಿ-**1,** ಹಾವೇರಿ
<u>ಎಸ್.ಸಿ. **13/2024**</u>

PW-02

CW-06

ಸಾಕ್ಷಿದಾರರ ಹೆಸರುಃ ಮಾಲತೇಶ ಲಕ್ಷ್ಮಣ ಜೋಗೇಶ

ವಯಸ್ಸುಃ 48 ವರ್ಷ

ಉದ್ಯೋಗಃ ಕೂಲಿ ಕೆಲಸ

ಹಾಲಿ ವಾಸ ಸ್ಥಳಃ ಗೆಜ್ಜಿಹಳ್ಳಿ ತಾಃ ಹಾನಗಲ್ಲ

ದಿನಾಂಕ**: 24.01.2025** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು**.**

<u>ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಅಭಿಯೋಜಕರಿಂದಃ</u>

ಚಾಸಾ-1 ಗೊತ್ತು. ಇವರು ಪರಿಚಯಸ್ಥ. ಸದರಿಯವರು ನಮ್ಮೂರಿನ ಗ್ರಾಮ ಪಂಚಾಯತಿ ಸದಸ್ಯರಾಗಿರುತ್ತಾರೆ. ಚಾಸಾ-7 , 9, 22 , 25 ಚಾಸಾ-1 ರವರ ಅಣ್ಣನ ಮಕ್ಕಳು. ಚಾಸಾ- 9 ಚಾಸಾ-1 ರವರ ಅಣ್ಣನ ಮಗಳು. ಚಾಸಾ-10 ಚಾಸಾ-1 ರವರ ಹೆಂಡತಿ. ಚಾಸಾ- 8, 11 ರಿಂದ 17 , 23 ಗೊತ್ತು ನಮ್ಮೂರಿನವರು. ಚಾಸಾ-24 ರವರು ಚಾಸಾ-1 ರವರ ಅಣ್ಣ. ಆರೋಪಿತರು ಗೊತ್ತು. 2 ನೇ ಆರೋಪಿ ಈ ದಿನ ಗೈರು ಹಾಜರಾಗಿರುತ್ತಾರೆ. 2022 ರಲ್ಲಿ ನಮ್ಮೂರಲ್ಲಿ ದ್ಯಾಮವ್ವ ದೇವತೆಯ ಜಾತ್ರೆ ಇತ್ತು. ತಾಃ 22.03.2022 ರಂದು ಚಾಸಾ-1 ರವರು ಜಾತ್ರೆಯ ನಿಮಿತ್ತ ದ್ಯಾಮವ್ವ ದೇವಿಯ ಮೂರ್ತಿಯ ಮೆರವಣಿಗೆ ಮಾಡಲು ಟ್ರ್ಯಾಕ್ಟರನ್ನು ಸಿದ್ದಪಡಿಸಿ ರಾತ್ರಿ ಮನೆಗೆ ವಾಪಸ್ಸಾಗುತ್ತಿದ್ದೆವು. ರಾತ್ರಿ 10.00 ರ ಸುಮಾರಿಗೆ ಊಟ ಮಾಡಿ ಮನೆಯ ಹೊರಗಡೆ ಬಂದಾಗ 3 ಜನ ಆರೋಪಿತರು ಬೈಕನಲ್ಲಿ ನಮ್ಮ ಮನೆಗೆ ಬಂದು ಚಾಸಾ-1 ರವರನ್ನು ಕುರಿತು ಅವರ ಓಣಿಗೆ ನೀರು ಯಾಕೆ ಬಿಟ್ಟಿಲ್ಲ ಎಂದು ಕೇಳಿದರು. ಆಗ ಚಾಸಾ-1 ರವರು ಪಂಚಾಯತಿ ಕೊಳವೆ ಬಾವಿಯ ಮೋಟರ್ ಪಂಪಸೇಟ್ ಕೇಬಲ್ ಕಟ್ಟಾಗಿದ್ದು ಜೋಡಿಸಿದಾಗ ನೀರು ಬರುತ್ತದೆ ಎಂದು ಹೇಳಿದರು. ಅಷ್ಟಕ್ಕೆ ಆರೋಪಿತರು ಸಿಟ್ಟಾಗಿ ಚಾಸಾ-1 ರವರನ್ನು ಕುರಿತು ಯಾಕೆ ಮೆಂಬರ್ ಆಗಿದಿಯಲೇ ಸೂಳೇ ಮಗನೇ ಅಂತಾ ಅವಾಚ್ಚ ಶಬ್ದಗಳಿಂದ ಬೈದು ಅವರ ಮೈಮೇಲೆ ಏರಿ ಬಂದು ಅವರ ಶರ್ಟ ಹಿಡಿದುಕೊಂಡು ಕೈಯಿಂದ ಹೊಡೆದರು. ಆಗ ಚಾಸಾ-1 ರವರ ಅಣ್ಣನ ಮಗಳು ಮತ್ತು ಚಾಸಾ-1 ರವರ ಹೆಂಡತಿ ಮನೆಯಿಂದ ಹೊರಗೆ ಅವರನ್ನು ಬಿಡಿಸಿಕೊಳ್ಳಲು ಬಂದರು. ಬಿಡಿಸಿಕೊಳ್ಳಲು ಬಂದ ಚಾಸಾ-9 , 10 ರವರಿಗೆ ಆರೋಪಿತರು ಅವರನ್ನು ಎಳೆದಾಡಿ , ಜಗ್ಗಿ ದೂಡಿ ಅವರ ಹೆಣ್ಣು ತನದ ಮಾನಭಂಗ ಮಾಡಿದರು. ಅಷ್ಟರಲ್ಲಾಗಲೇ 1 ನೇ ಆರೋಪಿಯು

ತನ್ನ ಮೋಟರ ಸೈಕಲನಲ್ಲಿದ್ದ ಬ್ಯಾಗನಲ್ಲಿದ್ದ ಚಾಕುವನ್ನು ತೆಗೆದುಕೊಂಡು ಬಂದಿದ್ದು, ಆಗ ನಾನು ಮತ್ತು ಚಾಸಾ-8 ರವರು ಸ್ಥಳಕ್ಕೆ ಹೋದೆವು. 1 ನೇ ಆರೋಪಿಯು ಚಾಕುವಿನಿಂದ ಚಾಸಾ-7 ರವರಿಗೆ ಎಡ ಪಕ್ಕಡಿಗೆ , ಬೆನ್ನಿಗೆ ಚುಚ್ಚಿದರು. ಅದರಿಂದಾಗಿ ಚಾಸಾ-7 ರವರಿಗೆ ರಕ್ತಗಾಯವಾಗಿತ್ತು. ಬಿಡಿಸಲು ಬಂದ ಚಾಸಾ-8 ರವರಿಗೆ 1 ನೇ ಆರೋಪಿಯು ಚಾಕುವಿನಿಂದ ಬೆನ್ನಿಗೆ ಚುಚ್ಚಿ ರಕ್ತಗಾಯಪಡಿಸಿದರು. ಅಷ್ಟರಲ್ಲಾಗಲೇ ಬಿಡಿಸಲು ಬಂದ ನನಗೆ 1 ನೇ ಆರೋಪಿಯ ಬಲಗೈ ಅಂಗೈಗೆ ಚಾಕು ಹಾಕಿದನು. ಚಾಸಾ-1 ರವರಿಗೆ ಆರೋಪಿತರು ಕೈಯಿಂದ ಹೊಡಿ ಬಡಿ ಮಾಡಿ ಅವಾಚ್ಯ ಶಬ್ದಗಳಿಂದ ಬೈದರು. ಆಗ ಚಾಸಾ-11 ರಿಂದ 20 ರವರು ಹಾಗೂ ಇನ್ನಿತರರು ಬಂದು ನಮ್ಮನ್ನು ಸಂತೈಸಿ ಗಾಯಗೊಂಡ ನನ್ನನ್ನು , ಚಾಸಾ-7 ಮತ್ತು 8 ರವರನ್ನು ಖಾಸಗಿ ವಾಹನದಲ್ಲಿ ಹಾನಗಲ್ಲ ಸರ್ಕಾರಿ ಆಸ್ಪತ್ರೆಗೆ ಉಪಚಾರಕ್ಕಾಗಿ ಕಳುಹಿಸಿಕೊಟ್ಟರು. ಚಾಸಾ-7, 8 ರವರನ್ನು ಹೆಚ್ಚಿನ ಉಪಚಾರಕ್ಕಾಗಿ ಹಾನಗಲ್ಲ ಸರ್ಕಾರಿ ಆಸ್ಪತ್ರೆಯಿಂದ ಹಾವೇರಿ ಜಿಲ್ಲಾಸ್ಪತ್ರೆಗೆ ಅಲ್ಲಿಂದ ಬೇರೆ ಆಸ್ಪತ್ರೆಗೆ ಕಳುಹಿಸಿರುತ್ತಾರೆ. ನಂತರ ಚಾಸಾ-1 ರವರು ಮಾರನೇ ದಿನ ಬೆಳಿಗ್ಗೆ ಹಾನಗಲ್ಲ ಠಾಣೆಗೆ ಹೋಗಿ ದೂರನ್ನು ಸಲ್ಲಿಸಿರುತ್ತಾರೆ. ಆರೋಪಿತರು ಬಳಸಿದ ವಾಹನದ ನಂಬರ KA-27/ EJ-8339 ಕೆಂಪು ಬಣ್ಣದ ಬಜಾಜ್ ಕಂಪನಿಯದ್ದಾಗಿತ್ತು. ಆರೋಪಿತರು ಯಾವ ಉದ್ದೇಶದಿಂದ ಹಲ್ಲೆ ಮಾಡಿರುತ್ತಾರೆ ಎಂಬುದು ನನಗೆ ತಿಳಿಯಲಿಲ್ಲ. ಸಾಕ್ಷಿಗೆ ನಿಪಿ-3 ರಿಂದ 5 ಫೋಟೊಗಳನ್ನು ತೋರಿಸಿದಾಗ ಸದರಿ ಫೋಟೊಗಳಲ್ಲಿ ಆರೋಪಿತರು ಬಳಸಿದ ವಾಹನವನ್ನು ನೋಡಿ ಗುರುತಿಸಿರುತ್ತಾರೆ. 1 ನೇ ಆರೋಪಿಯು ಬಳಸಿದ ಚಾಕುವನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೆ ಮುಮಾ-1 ಎಂದು ಗುರುತಿಸಲಾಯ್ತು. ಈ ಬಗ್ಗೆ ಪೋಲಿಸರು ನನ್ನನ್ನು ವಿಚಾರಿಸಿಲ್ಲ. ನಾನು ಯಾವುದೇ ಜಾಗವನ್ನು ತೋರಿಸಿಲ್ಲ. ಪೋಲಿಸರು ನನ್ನ ಸಮಕ್ಷಮ ಏನನ್ನು ವಶಪಡಿಸಿಕೊಂಡಿಲ್ಲ. ನಾನು ದಾಖಲೆಗಳಿಗೆ ಹೆಬ್ಬೆಟ್ಟು ಹಾಕುತ್ತೇನೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದಾಗ ಅದರಲ್ಲಿರುವ ತನ್ನ ಹೆಬ್ಬೆಟ್ಟನ್ನು ಗುರುತಿಸಿದ್ದರಿಂದ ಸದರಿ ದಾಖಲೆಯನ್ನು ನಿಪಿ-6 ಎಂದು ಗುರುತಿಸಲಾಯ್ತು. ನಿಪಿ-6 ರ ಮಾಹಿತಿ ಇಲ್ಲ. ಪ್ರಕರಣದ ಬಗ್ಗೆ ಹೆಚ್ಚಿನ ಮಾಹಿತಿ ಇಲ್ಲ.

(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಸಾಕ್ಷಿಯ ಪಾಟೀ ಸವಾಲಿಗೆ ಅನುಮತಿ ನೀಡಲಾಗಿದೆ)

<u>ಪಾಟೀ ಸವಾಲುಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ</u>

1 ನೇ ಆರೋಪಿಯು ನನ್ನ ಬಲಗೈ ಅಂಗೈಗೆ ಮುಮಾ-1 ರಿಂದ ರಕ್ತ ಗಾಯ ಪಡಿಸಿದನು ಎಂದರೆ ಸರಿ. ಆರೋಪಿತರು ಕೊಲೆ ಮಾಡುವ ಉದ್ದೇಶದಿಂದ ನಮ್ಮ ಮೇಲೆ ಚಾಕುವಿನಿಂದ ಹಲ್ಲೆ ಮಾಡಿರುತ್ತಾರೆ ಎಂದರೆ ಸರಿ. ದೂರು ಸಲ್ಲಿಸಿದ ಮರುದಿನ ಪೋಲಿಸರು ನಮ್ಮೂರಿಗೆ ಬಂದು ನಾನು

ತೋರಿಸಿದಂತೆ ಗುನ್ಹಾ ಜಾಗದ ಪಂಚನಾಮೆಯನ್ನು ನಿಪಿ-6 ರಂತೆ ಮಾಡಿ ನನ್ನ ಹೆಬ್ಬೆಟ್ಟು ಸಹಿ ಪಡೆದಿರುತ್ತಾರೆ ಎಂದರೆ ಸರಿ. ಸದರಿ ಜಾಗದಿಂದ ಮುಮಾ-1 ನ್ನು ಮತ್ತು ನಿಪಿ-3 ರಿಂದ 5 ರಲ್ಲಿರುವ KA-27/EJ-8339 ವಾಹನವನ್ನು ನಾನು ತೋರಿಸಿದಂತೆ ಪೋಲಿಸರು ಕೃತ್ಯಕ್ಕೆ ಬಳಸಿದಂತೆ ಪಂಚರಾದ ಚಾಸಾ-2, 3 ರವರ ಸಮಕ್ಷಮ ಮದ್ಯಾಹ್ನ 12.00 – 1.15 ವರೆಗೆ ಪಂಚನಾಮೆ ಮಾಡಿ ಜಪ್ತಿ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಆ ಕಾಲಕ್ಕೆ ಪೋಲಿಸರು ಪೊಟೊಗಳನ್ನು ತೆಗೆದಿರುತ್ತಾರೆ ಎಂದರೆ ಸರಿ. ಸಾಕ್ಷಿಗೆ ಎರಡು ಪೊಟೊಗಳನ್ನು ತೋರಿಸಿದಾಗ ಅದರಲ್ಲಿ ತನ್ನ , ಪೋಲಿಸರು, ಗುನ್ಹಾ ಜಾಗವನ್ನು, ಪಂಚರನ್ನು ನೋಡಿ ಗುರುತಿಸಿದ್ದು, ಮೂಲ ದಾಖಲೆ ಇಲ್ಲದ ಕಾರಣ ಸರ್ಕಾರಿ ಅಬಿಯೋಜಕರ ಮನವಿಯನ್ನು ತಳ್ಳಿ ಹಾಕಿ ಪೊಟೊಗಳನ್ನು ನಿಶಾನೆಯಾಗಿ ಗುರುತಿಸಲಾಗಲಿಲ್ಲ. ನನಗೆ ಓದು ಬರಹ ಗೊತ್ತಿಲ್ಲ.

ಪಾಟೀ ಸವಾಲು ಆರೋಪಿತರ ಪರ ವಕೀಲರಿಂದಃ

ಆರೋಪಿ ಪರ ವಕೀಲರು ಅರ್ಜಿ ಸಲ್ಲಿಸಿ ಸಮಯಾವಕಾಶ ಕೇಳಿದ್ದು, ಸಮಯಾವಕಾಶ ನೀಡಲಾಯ್ತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ಎಫ್.ಟಿ.ಎಸ್.ಸಿ-1
ಹಾವೇರಿ.